# ಪ್ಲಾಸ್ಟಿಕ್ ಕುಂಡದಲ್ಲಿ ಅರಳಿದ ಹೂಗಳು

ಹೂವಿನ ತೋಟ ಮಾಡಲು ಜಾಗವೇ ಬೇಕೆಂದಿಲ್ಲ; ದುಬಾರಿ ಹೂಕುಂಡಗಳ ಅಗತ್ಯವೂ ಇಲ್ಲ. ಬಳಸಿ ಬಿಸಾಡುವ ನೀರಿನ ಬಾಟಲ್, ಬಕೆಟ್, ಚಾಕೊಲೇಟ್, ಪೈಂಟ್ ಡಬ್ಬಗಳಲ್ಲೂ ಬಣ್ಣ ಬಣ್ಣದ ಹೂಗಳನ್ನು ಬೆಳೆಸಿ ಖುಷಿ ಪಡಬಹುದು.

■ ಚಿತ್ರ– ಲೇಖನ:
**ದಿನೇಶ್ ಸಿ.ಎಚ್.**

ಕಡಿಮೆ ಜಾಗದಲ್ಲಿ ಯಾವುದೇ ಖರ್ಚಿಲ್ಲದೆ ಹೂದೋಟ ಮಾಡಬಹುದು. ಮಾರ್ಕೆಟ್‌ನಲ್ಲಿ ಪ್ಲಾಸ್ಟಿಕ್ ಹೂವಿನ ಕುಂಡಗಳು ಲಭ್ಯವಿರುವುದಾದರೂ ತುಂಬ ದುಬಾರಿ. ಕಮ್ಮಿ ಎಂದರೂ ಒಂದಕ್ಕೆ 150ರಿಂದ 200 ರೂಪಾಯಿ. ಇದರ ಬದಲಿಗೆ ನಾವೇ ಹೂವಿನ ಕುಂಡ ತಯಾರಿಸಿಕೊಳ್ಳಬಹುದಲ್ಲ!

### ಹೇಗೆ?

ಸಾಮಾನ್ಯವಾಗಿ ಹಳೆಯದಾದ ವಾಟರ್ ಬಾಟಲ್, ಪ್ಲಾಸ್ಟಿಕ್ ಡಬ್ಬ, ಪೈಂಟ್ ಡಬ್ಬ, ಬಕೆಟ್ ಹಾಗೆಯೇ ಎಸೆಯುವಂತಹ ಹಾರ್ಲಿಕ್ಸ್, ಚಾಕೊಲೇಟ್, ಕಾಂಪ್ಲಾನ್ ಡಬ್ಬಗಳನ್ನು ಬಳಸಿಕೊಂಡು ಚಿಕ್ಕ ಹೂ ಕುಂಡಗಳನ್ನು ಮಾಡಬಹುದು. ಇದು ಎಷ್ಟು ವರ್ಷವಾದರೂ ನಾಶವಾಗುವುದಿಲ್ಲ.

ಪ್ಲಾಸ್ಟಿಕ್ ಡಬ್ಬದ ಮುಚ್ಚಳದ ಭಾಗವನ್ನು ಕತ್ತರಿಸಿ, ಅದರ ತಳ ಭಾಗದಲ್ಲಿ 4ರಿಂದ 5 ಸಣ್ಣ ಸಣ್ಣ ರಂಧ್ರಗಳನ್ನು ಮಾಡಿ ಮಣ್ಣು ಹಾಕಿ ನಮಗೆ ಬೇಕಾದ ಹೂವಿನ ಗಿಡಗಳನ್ನು ನೆಡಬಹುದು. ಹಾಗೆಯೇ ಪೈಂಟ್ ಡಬ್ಬವನ್ನು ಚೆನ್ನಾಗಿ ತೊಳೆದು, ತಳ ಭಾಗದಲ್ಲಿ ತೂತು ಮಾಡಿ ಮಣ್ಣು ಹಾಕಿ ಹೂವಿನ ಗಿಡಗಳನ್ನು ನೆಡಬಹುದು.

ಪ್ಲಾಸ್ಟಿಕ್ ಬಾಲ್ ಅಂಗಡಿಯಿಂದ ಖರೀದಿಸಿ ಮಕ್ಕಳಿಗೆ ಆಡಲು ಕೊಡುತ್ತೇವೆ. ಅದು ಒಂದು ವೇಳೆ ಒಡೆದರೆ, ಹಾಳಾದರೆ, ಅದನ್ನ ಹೂಕುಂಡವಾಗಿ ಪರಿವರ್ತಿಸಬಹುದು. ಮೇಲಿನ ಭಾಗದಲ್ಲಿ ನಿಮಗೆ ಬೇಕಾದಂತಹ ಆಕೃತಿಯಲ್ಲಿ ಕತ್ತರಿಸಿ ನಂತರ ತಳ ಭಾಗದಲ್ಲಿ ತೂತು ಮಾಡಿ ಮಣ್ಣುಹಾಕಿ ಹೂವಿನ ಗಿಡ ನೆಡಬಹುದು.

ಹಾರ್ಲಿಕ್ಸ್, ಚಾಕೊಲೇಟ್, ಕಾಂಪ್ಲಾನ್ ತೆಗೆದುಕೊಂಡು ಖಾಲಿಯಾದ ನಂತರ ಎಸೆಯುತ್ತೇವೆ. ಇದನ್ನು ನಾವು ಹೂಕುಂಡವಾಗಿ ಮಾರ್ಪಡಿಸಬಹುದು. ಇದರ ಮುಚ್ಚಳದ ಭಾಗವನ್ನು ಕತ್ತರಿಸಿ ತಳದಲ್ಲಿ ತೂತು ಮಾಡಿ, ಮಣ್ಣುಹಾಕಿ ಹೂವಿನ ಗಿಡ ನೆಡಬಹುದು. ಹಾಗೆಯೇ ತಳದಲ್ಲಿ ತೂತು ಮಾಡದೆ ನೀರು ಹಾಕಿ ಅಂತರಗಂಗೆ (ಒಂದು ರೀತಿಯ ನೈದಿಲೆ) ಹಾಕಬಹುದು.

ಹೂ ಕುಂಡಗಳು ಇನ್ನೂ ಚಂದ ಕಾಣಲು ಬೇಕಾದ ಪೈಂಟ್ ಹಚ್ಚಿ. ಹೂ ಕುಂಡಗಳಿಗೆ ಹ್ಯಾಂಗರ್ ಸಿಕ್ಕಿಸಿ ಹ್ಯಾಂಗಿಂಗ್ ಆಗಿಯೂ ಬಳಸಬಹುದು.

### ನಗರ ಪ್ರದೇಶಗಳಲ್ಲಿನ ಮನೆ ಅಥವಾ ಸ್ವಲ್ಪವೇ ಜಾಗದಲ್ಲಿ ಹೇಗೆ ಗಿಡ ಬೆಳೆಸಬಹುದು?

**ಹ್ಯಾಂಗಿಂಗ್ ಮಾಡಿ:** ಮೇಲೆ ಸೂಚಿಸಿದಂತೆ ನಿರ್ಮಿಸಿದ ಕುಂಡಗಳಿಗೆ ಹ್ಯಾಂಗಿಂಗ್ ಸೆಟ್ ಮಾಡಿ ಹ್ಯಾಂಗ್ ಮಾಡಿ. ಖಾಲಿ ಗೋಡೆಗಳಲ್ಲಿ ಮೊಳೆ ಹೊಡೆದು ಹ್ಯಾಂಗ್ ಮಾಡಿ. ಸಿಟೌಟ್ ಮತ್ತಿತರ ಜಾಗಗಳಲ್ಲಿ, ಮನೆಯ ಒಳಗಡೆ ಮತ್ತು ಕಿಟಕಿಯ ಪಕ್ಕದಲ್ಲಿಯೂ ಹ್ಯಾಂಗ್ ಮಾಡಬಹುದು. ಇದು ಆದಷ್ಟು ಕೈಗೆಟಕುವಂತಿರಲಿ. ಇದರಿಂದ ಗಿಡಗಳಿಗೆ ನೀರುಣಿಸಲು ಸುಲಭ ಮತ್ತು ಜಾಗದ ಉಳಿತಾಯವಾಗುತ್ತದೆ.

**ವರ್ಟಿಕಲ್ ಗಾರ್ಡನ್:** ಇಂದಿನ ದಿನಗಳಲ್ಲಿ ವರ್ಟಿಕಲ್ ಕಾಲಮ್ ಗಾರ್ಡನ್ ಹೆಚ್ಚು ಪ್ರಚಲಿತದಲ್ಲಿದೆ. ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವವರು, ಸ್ವಲ್ಪ ಜಾಗದಲ್ಲಿ ಇರುವವರು, ಒಂದು ಕಂಬಕ್ಕೆ ಅಥವಾ ಪೈಪ್‌ಗೆ ಉದ್ದನೆಯ ಮೊಳೆ ಬಡಿದು ಅಲ್ಲಲ್ಲಿ ನೇತು ಹಾಕಬಹುದು. ಒಂದು ಕಂಬದಲ್ಲಿ ನಾಲ್ಕು, ಎಂಟು ಹೀಗೆ ಡಿಫರೆಂಟ್ ವಿಧದಲ್ಲಿ ಪ್ರಯತ್ನಿಸಬಹುದು.

**ಒಂದಿಷ್ಟು ಜಲ ಸಸ್ಯಗಳು:** ಸ್ಪ್ರೈಟ್, ಕೊಕೊಕೋಲಾ, ನೀರಿನ ಬಾಟಲ್‌ಗಳನ್ನು ಹಾಗೆ ಬಿಸಾಡುವ ಬದಲಾಗಿ, ಅರ್ಧದಿಂದ ಕಟ್ ಮಾಡಿ ನೀರು ಹಾಕಿ ಜಲಸಸ್ಯಗಳಾದ ಅಂತರ್‌ಗಂಗೆ ಮೊದಲಾದ ನೀರಿನಲ್ಲಿ ಬೆಳೆಯಬಹುದಾದ

